ನುರಿತ ನಟಿ, ಡಬ್ಬಿಂಗ್ ಕಲಾವಿದೆ ಸುನೇತ್ರಾ ಪಂಡಿತ್ ಅವರೂ ಸೇರಿಕೊಂಡರು. ಅವರು ಓಪನ್ ಮೈಕ್‌ನಲ್ಲಿ ಈಗಲೂ ಪ್ರಯತ್ನಿಸಿಯೇ ನಮ್ಮ ಮನ ಗೆದ್ದದ್ದು ವಿಶೇಷ. ಉತ್ತರ ಕರ್ನಾಟಕದ ವಿನಾಯಕ ಕುಲಕರ್ಣಿ ಎಂಬ ಇನ್ನೊಬ್ಬರೂ ನಮ್ಮ ತಂಡಕ್ಕೆ ಸಿಕ್ಕಿದರು' ಎಂದು ಪವನ್ ತಮ್ಮ ತಂಡದ ಪರಿಚಯ ಮಾಡಿಕೊಟ್ಟರು.

ಮೊದಲು ತಂಡ ಪ್ರದರ್ಶನ ನೀಡಿದ್ದು ಬೆಂಗಳೂರಿನ ಎಂ.ಜಿ. ರಸ್ತೆಯ ರಂಗೋಲಿ ಮೆಟ್ರೋ ಬುಲೆವಾರ್ಡ್‌ನಲ್ಲಿನ 'ರಂಗಸ್ಥಳದಲ್ಲಿ'. ಅಲ್ಲಿ ಕಾರ್ಯಕ್ರಮ ನೋಡಿದ ನೂರಾಹತ್ತು ಜನರೂ ಎದ್ದುನಿಂತು ಚಪ್ಪಾಳೆ ತಟ್ಟಿದಾಗ ಆತ್ಮವಿಶ್ವಾಸ ಬಂತು. ಎರಡನೇ ಪ್ರದರ್ಶನ ನೀಡಿದಾಗ ಚಪ್ಪಾಳೆಯ ದನಿ ಹೆಚ್ಚಾದದ್ದೇ ಇನ್ನಷ್ಟು ಮೆಟ್ಟಿಲುಗಳನ್ನು ಏರಲು ಪ್ರೇರಣೆ ಸಿಕ್ಕಿತು ಎಂದು ನೆನೆದರು.

'ಇದುವರೆಗೆ ನಾವು 125–130 ಪ್ರದರ್ಶನಗಳನ್ನು ನೀಡಿದ್ದೇವೆ. ಬೆಂಗಳೂರು ಅಲ್ಲದೆ ಮಂಗಳೂರು, ಹಾಸನಕ್ಕೂ ಹೋಗಿ ಬಂದಿದ್ದೇವೆ. ಎಲ್ಲಾ ಅಂದುಕೊಂಡಂತೆ ಆದರೆ ಸಿಡ್ನಿಯಲ್ಲೂ ಪ್ರದರ್ಶನಕ್ಕೆ ಆಹ್ವಾನ ಬರಬಹುದು' ಎನ್ನುವ ಪವನ್, ಇತ್ತೀಚೆಗೆ ಕಲರ್ಸ್ ವಾಹಿನಿಯಲ್ಲಿ 'ಕಾಮಿಡಿ ಕಂಪನಿ' ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಹೋಗಿ ನೀಡಿದ ಪ್ರದರ್ಶನವನ್ನೂ ಸ್ಮರಿಸಿದರು.

ಸ್ನೇಹಾ ಸುಹಾಸ್ ಎಂಬ ಸ್ನೇಹಿತೆ ಮೊದಲು ಇವರ ತಂಡದಲ್ಲಿ ಇದ್ದರು. 'ಲೋಲ್‌ಬಾಗ್' (**Laugh Out Loud**) ಎಂಬ ಹೆಸರನ್ನು ಸೂಚಿಸಿದ್ದೇ ಅವರು. ಅದು ಕ್ಲಿಕ್ ಆದಮೇಲೆ ಈಗ ತಂಡದಲ್ಲಿ ಎಂಟು ಜನ ಪ್ರದರ್ಶನಗಳನ್ನು ನೀಡುತ್ತಿದ್ದಾರೆ. ಎರಡು ಮೂರು ತಿಂಗಳಿಗೆ ಒಮ್ಮೆ 'ಓಪನ್ ಮೈಕ್' ಆಯೋಜಿಸಿ, ಹೊಸ ಪ್ರತಿಭೆಗಳಿಗೂ ಅವಕಾಶ ಕಲ್ಪಿಸುತ್ತಿದ್ದಾರೆ. ಅಲ್ಲಿ ಐದು ನಿಮಿಷದಲ್ಲಿ ನಕ್ಕು ನಗಿಸಬೇಕು. ಗೆಲ್ಲುವವರಿಗೆ ಮುಂದಿನ ಪ್ರದರ್ಶನದಲ್ಲಿ ವೇದಿಕೆ ಸಿಗುತ್ತದೆ.

**boomyshow** ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಇದಕ್ಕೂ ಮೊದಲೇ ಪಳಗಿದ್ದವರು ಪವನ್. ಇಂಗ್ಲಿಷ್, ಹಿಂದಿಯಲ್ಲಿ ಕಾಮಿಡಿ ಮಾಡುತ್ತಿದ್ದ ಅವರನ್ನು ಕನ್ನಡದಲ್ಲೇ ಮಾಡುವಂತೆ ಪುಸಲಾಯಿಸಿದ್ದು ಅನೂಪ್ ಮಯ್ಯ. ಅವರ ಸಲಹೆಯನ್ನು ಕಣ್ಣಿಗೊತ್ತಿಕೊಂಡ ಮೇಲೆ ಇನ್ನಷ್ಟು ಸಮಾನಮನಸ್ಕರು ಜತೆಯಾದದ್ದು.

'ಹಾಸ್ಯ ಸುಲಭವಲ್ಲ. ಪ್ರಾಣೇಶ್ ಒಂಥರಾ ದ್ರೋಣಾಚಾರ್ಯ ಇದ್ದಹಾಗೆ. ನಾವು ಅವರು ಹಾಕಿಕೊಟ್ಟ ಮಾರ್ಗದಲ್ಲೇ ನಡೆಯುತ್ತಿದ್ದೇವೆ. ಬರೆಯಬೇಕು. ತಿದ್ದಬೇಕು. ಹೆಚ್ಚು ತಿದ್ದಿದಷ್ಟೂ ಸ್ಕ್ರಿಪ್ಟ್ ಚೆನ್ನಾಗಿ ಆಗುತ್ತದೆ. ನಮ್ಮ ಪ್ರದರ್ಶನಗಳನ್ನು ಯೂಟ್ಯೂಬ್‌ನಲ್ಲೂ ಅಪ್‌ಲೋಡ್ ಮಾಡುತ್ತಿದ್ದು, ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. **voot**ಲ್ಲೂ ನಾವಿದ್ದೇವೆ' ಎಂದು ಪ್ರಗತಿ ಪಥದ ಮೇಲೆ ಪವನ್ ಬೆಳಕು ಬೀರಿದರು.

'ಕನ್ನಡಿ ಮುಂದೆ ನಿಂತೋ, ಸ್ನೇಹಿತರ ಮುಂದೆಯೋ ಹಾಸ್ಯ ಪ್ರದರ್ಶನವನ್ನು ಟ್ರೈ ಮಾಡಬೇಕು. ಅಲ್ಲಿನ ಪರಿಣಾಮ ಚೆನ್ನಾಗಿದೆ ಎಂದಾದರೆ ಗೆದ್ದಂತೆಯೇ. ಇಲ್ಲವಾದರೆ ತಿದ್ದಿಕೊಳ್ಳಬೇಕು. ತಾರಾನಟರ ಸಿನಿಮಾಗಳು ಬಿಡುಗಡೆಯಾದಾಗ, ಐಪಿಎಲ್ ಕ್ರಿಕೆಟ್ ಪಂದ್ಯಗಳು ನಡೆವಾಗ ನಮ್ಮ ತಂಡಕ್ಕೆ ಬೇಡಿಕೆ ಇರುವುದಿಲ್ಲ. ಉಳಿದಂತೆ ಬಹುತೇಕ ವೀಕೆಂಡ್‌ಗಳಲ್ಲಿ ಪ್ರದರ್ಶನಕ್ಕೆ ಬುಕ್ ಮಾಡುತ್ತಾರೆ. ಚಿಕ್ಕ ಪ್ರಾಯದವರಿಂದ ಹಿಡಿದು ಅಜ್ಜ–ಅಜ್ಜಿಯರವರೆಗೆ ಎಲ್ಲರೂ ನಮ್ಮ ನಗೆ ಪ್ರದರ್ಶನ ನೋಡಿ ನಗಬಹುದು' ಎನ್ನುವ ಪವನ್ ಮಾತಿನಲ್ಲಿ ಸಾರ್ಥಕ್ಯವಿದೆ.

'ಒಂದು ಗಂಟೆ ಯಾವುದೇ ಬ್ರೇಕ್ ಇಲ್ಲದೆ ಹಲವು ಬಗೆಯ ಹಾಸ್ಯ ರಸಾಯನ ಇರುವ ಬಫೆಯನ್ನು ನಾವು ಕೊಡುತ್ತೇವೆ. 70–80 ಶೋಗಳಾದ ಮೇಲೆ ಅದು ರುಚಿಕಟ್ಟೂ ಆಗಿದೆ ಎಂಬ ಹೆಮ್ಮೆ ನಮ್ಮದು' ಎಂದು ಅವರು ಬೀಗುತ್ತಾರೆ. ಕನ್ನಡದಲ್ಲಿ ಸದ್ದು ಮಾಡುತ್ತಿರುವ 'ಸ್ಟ್ಯಾಂಡ್–ಅಪ್ ಕಾಮಿಡಿ' ತಂಡ ಇದಾಗಿರುವುದರಿಂದ ಅವರು ನಿಸ್ಸಂಶಯವಾಗಿ ಬೀಗಬಹುದು!

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in

